ಸಂಪುಟ 01 | ಸಂಚಿಕೆ 82 | ಬುಧವಾರ 04 ಫೆಬ್ರವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ವಿಶ್ವ ಕ್ಯಾನ್ಸರ್ ದಿನ

ಪ್ರತಿ ವರ್ಷ ಫೆಬ್ರವರಿ 4 ರಂದು ವಿಶ್ವ ಕ್ಯಾನ್ಸರ್ ದಿನವನ್ನು ಜಾಗತಿಕವಾಗಿ ಆಚರಿಸಲಾಗುತ್ತದೆ ಮತ್ತು ಕ್ಯಾನ್ಸರ್ ಕಾಯಿಲೆ ಮತ್ತು ಅದನ್ನು ಹೇಗೆ ಗುಣಪಡಿಸುವುದು ಎಂಬುದರ ಕುರಿತು ಜನರಿಗೆ ಅರಿವು ಮೂಡಿಸಲು ಘಉಊಔ ಇದನ್ನು ಆಚರಿಸುತ್ತದೆ. 2020 ರ ಥೀಮ್ 'ನಾನು ಮತ್ತು ನಾನು'. ಘಉಊಔ ಪ್ರಕಾರ, ಈ ಥೀಮ್ ವೈಯಕ್ತಿಕ ಬದ್ಧತೆಯನ್ನು ಒತ್ತಾಯಿಸುವ ಕ್ರಿಯೆಗೆ ಸಬಲೀಕರಣಗೊಳಿಸುವ ಕರೆಯಾಗಿದೆ ಮತ್ತು ಭವಿಷ್ಯದ ಮೇಲೆ ಪರಿಣಾಮ ಬೀರಲು ಈಗ ತೆಗೆದುಕೊಂಡ ವೈಯಕ್ತಿಕ ಕ್ರಿಯೆಯ ಶಕ್ತಿಯನ್ನು ಪ್ರತಿನಿಧಿಸುತ್ತದೆ.

## ಸುಭಾಷಿತ

ಸೂರ್ಯನಂತೆ ಪ್ರಜ್ವಲಿಸಬೇಕಾದರೆ,
ಅದರಂತೆ ದಹಿಸಬೇಕು.

ಎ.ಪಿ.ಜೆ. ಅಬ್ದುಲ್ ಕಲಾಂ

# ದೇಶದ್ರೋಹ ಪದ ಬಳಕೆಗೆ ವಿಷಾದ

**ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ದೇಶದ್ರೋಹಿ ಪದ ಬಳಕೆ ಮಾಡಿದ ವಿಚಾರ ವಿಧಾನ ಪರಿಷತ್‌ನಲ್ಲಿಂದು 2ನೇ ದಿನವೂ ಬಾರಿ ಗದ್ದಲ ಕೋಲಾಹಲಕ್ಕೆ ವೇದಿಕೆಯಾಯಿತು. ಕಾಂಗ್ರೆಸ್ ಸದಸ್ಯ ನಸೀರ್ ಅಹ್ಮದ್ ಕ್ಷಮೆ ಕೇಳಬೇಕು ಎಂದು ಪ್ರತಿಪಕ್ಷಗಳು ಬಿಗಿ ಪಟ್ಟು ಹಿಡಿದ ಹಿನ್ನಲೆಯಲ್ಲಿ ನಸೀರ್ ಅಹ್ಮದ್ ಒತ್ತಡಕ್ಕೆ ಮಣಿದು ವಿಷಾದ ವ್ಯಕ್ತಪಡಿಸಿದರು.**

ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ದೇಶದ್ರೋಹಿ ಪದ ಬಳಸಿರುವ ಸದಸ್ಯ ನಸೀರ್ ಅಹಮದ್ ಕ್ಷಮೆಗೆ ಆಗ್ರಹಿಸಿ ಪ್ರತಿಪಕ್ಷಗಳ ಸದಸ್ಯರು ನಿನ್ನೆ ರಾತ್ರಿಯಿಂದ ಮೇಲ್ಮನೆಯಲ್ಲಿ ನಡೆಸಿದ ಧರಣಿಯನ್ನು ಇಂದು ಮುಂದುವರೆಸಿದರು. ಕಲಾಪ ಅರಂಭವಾದ ಸದನದ ಬಾವಿಂಗಿಳಿದು ಧರಣಿ ಮುಂದುವರೆಸಿದ ಬಿಜೆಪಿ ಜೆಡಿಎಸ್ ಸದಸ್ಯರು ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಅಸಂಸದೀಯ ಪದ ಬಳಕೆ ಮಾಡಿರುವ ನಸೀರ್ ಅಹಮದ್ ಅವರಿಂದ ಕ್ಷಮೆ ಕೇಳಿಸಿ ಇಲ್ಲವೇ ಹೊರಹಾಕಿ ಎಂದು ಆಗ್ರಹಿಸಿದರು.

ಸಭಾಪತಿ ಬಸವರಾಜ್ ಹೊರಟ್ಟಿ ಅವರು ನಾನು ಹೇಳುವುದನ್ನು ಕೇಳಿಸಿಕೊಳ್ಳಿ ಹಿಂದೆ ಇದೇ ರೀತಿ ಮೂರ್ನಾಲ್ಕು ಬಾರಿ ಇದೇ ರೀತಿಯ ಪ್ರಸಂಗಳು ನಡೆದಾಗ ಎಚ್ಚರಿಕೆ ನೀಡಿದ್ದೇನೆ,ಅಸಂಸದೀಯ ಪದ ಬಳಕೆ ಮಾಡಿರುವುದು ಅಕ್ಷಮ್ಯ ಅಪರಾಧ ಇದು ಸದನದ ಒಕ್ಕೊರಲ ಅಭಿಪ್ರಾಯವಾಗಿದೆ.



ದೇಶದ ಪ್ರಧಾನಿ ಬಗ್ಗೆ ಅಸಂಸದೀಯ ಪದ ಬಳಕೆ ಸರಿಯಲ್ಲ, ಬೇಷರತ್ ಕ್ಷಮೆ ಕೋರಿ ಸದನದ ಸುಗಮ ಕಲಾಪಕ್ಕೆ ಅವಕಾಶ ನೀಡಬೇಕು ಎಂದು ರೂಲಿಂಗ್ ನೀಡಿದರು. ಪ್ರತಿಪಕ್ಷ ಸದಸ್ಯರು ಪ್ರಚೋದನೆ ಮಾಡಿದರು,ಸಿಟಿ ರವಿ ಪಾಕಿಸ್ತಾನದ ನಾಲಿಗೆ ಅದಕ್ಕೆ ಇರಬೇಕು ಈ ರೀತಿಯಲ್ಲಿ ಮಾತನಾಡಿದ್ದಾರೆ ಎಂದು ಹೇಳಿದ್ದಾರೆ ಮೊದಲು ಅದರ ಬಗ್ಗೆ ಕ್ಷಮೆಯಾಚಿಸಲಿ, ನಂತರ ನೋಡೋಣ ಬೇರೆ ಸದಸ್ಯರ ಪ್ರಚೋದನೆದಿಂದ ಮಾತನಾಡಿದ್ದೇನೆ ಎಂದು ನಸೀರ್ ಅಹಮದ್ ಹೇಳಿದರು.

ಇದನ್ನು ಒಪ್ಪದ ಪ್ರತಿಪಕ್ಷಗಳ ಸದಸ್ಯರು ಒಂದೇ ವಾಕ್ಯದಲ್ಲಿ ಕ್ಷಮೆ ಕೇಳಬೇಕು ಅದನ್ನು ಬಿಟ್ಟು ವಿವರಣೆ ಬೇಕಾಗಿಲ್ಲ ಅವರು ಕ್ಷಮೆ ಕೇಳಲಿ ಇಲ್ಲವೇ ಹೊರಹಾಕಿ ಎಂದು ಆಗ್ರಹಿಸಿದರು. ಆಗ ಮಧ್ಯ ಪ್ರವೇಶಿಸಿದ ಸಭಾನಾಯಕ ಭೋಸರಾಜ್ ಅವರು ಮೊದಲು ನಸೀರ್ ಅಹಮದ್ ಅವರು ಏನು ಹೇಳಲಿದ್ದಾರೆ ನೋಡೋಣ ಅನಂತರ ತೀರ್ಮಾನ ಮಾಡೋಣ ಎಂದರು. ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಮೊದಲು ಕ್ಷಮೆ ಕೇಳಲಿ ಅದನ್ನು ಬಿಟ್ಟು ಯಾವುದಕ್ಕೂ ಅವಕಾಶ ನೀಡುವುದಿಲ್ಲ ಎಂದಾಗ ಸದನದಲ್ಲಿ ಮಾತಿನ ಚಕಮಕಿ ನಡೆದು ಸದನವನ್ನು ಸಭಾಪತಿಗಳು ಕೆಲಕಾಲ ಮುಂದೂಡಿದರು. ಬಳಿಕ ಸದನ ಅರಂಭಗೊಂಡ ಬಳಿಕ ಸಭಾಪತಿ ಬಸವರಾಜ್ ಹೊರಟ್ಟಿ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ದೇಶದ್ರೋಹಿ ಪದ ಬಳಕೆ ಮಾಡಿರುವ ನಸೀರ್ ಅಹಮದ್ ವಿಷಾದ ವ್ಯಕ್ತಪಡಿಸಿ ಸದನದ ಸುಗಮ ಕಲಾಪಕ್ಕೆ ಅವಕಾಶ ನೀಡಬೇಕು ಎಂದರು.

ಈ ವೇಳೆ ಸಿಟಿ ರವಿ ಪಾಕಿಸ್ತಾನದ ನಾಲಿಗೆ ಅದಕ್ಕೆ ಇರಬೇಕು ಈ ರೀತಿಯಲ್ಲಿ ಮಾತನಾಡಿದ್ದಾರೆ ಎಂದು ಹೇಳಿರುವ ಸಂಬಂಧ ಕ್ಷಮೆಯಾಚಿಸಬೇಕು ಎಂದು ಸದಸ್ಯ ಸಲೀಂ ಅಹಮದ್ ಅವರು ಪತ್ರ ನೀಡಿರುವುದನ್ನು ಪ್ರಸ್ತಾಪಿಸಿ ಸಿಟಿ ರವಿ ಅವರ ವಿಷಾದಕ್ಕೆ ಆಗ್ರಹಿಸಿದರು. ಸಭಾಪತಿ ಹೊರಟ್ಟಿ ಅವರು ಮಾಡಿದ ವಿನಂತಿಯಂತೆ ಸದಸ್ಯ ನಸೀರ್ ಅಹಮದ್ ಅವರು ಪ್ರಧಾನಿಗಳ ಬಗ್ಗೆ ನೀಡಿದ ಹೇಳಿಕೆ ಸಂಬಂಧ ವಿಷಾದ ವ್ಯಕ್ತಪಡಿಸಿದರು ಬಳಿಕ ಆಡಳಿತ ಪಕ್ಷದ ಸದಸ್ಯರು ಸಿವಿ ರವಿ ಅವರ ವಿಷಾದಕ್ಕೆ ಪಟ್ಟು ಹಿಡಿದಾಗ ವಿರೋ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿ ವಿಪಕ್ಷದ ಸದಸ್ಯರು ಸಿಟಿ ರವಿ ಯಾರ ಹೆಸರನ್ನು ಬಳಸದೇ ಹಿನ್ನೆಲೆಯಲ್ಲಿ ವಿಷಾದ ವ್ಯಕ್ತಪಡಿಸುವುದಿಲ್ಲ ಬದಲಾಗಿ ಅವರು ಬಳಸಿದ ಪದ ಕಡತದಿಂದ ತೆಗೆಯುವಂತೆ ಸಭಾಪತಿಗಳನ್ನು ಆಗ್ರಹಿಸಿದರು.

## ತೋಳ ಹಾವಳಿ 25ಕ್ಕೂ ಹೆಚ್ಚು ಕುರಿಗಳ ಸಾವು

❑ ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣ ಸಮೀಪದ ಅಮೀನಗಡ ಗ್ರಾಮದ ಹುಚ್ಚರಡ್ಡಿ ಎಂಬುವವರಿಗೆ ಸೇರಿದ ಕುರಿಹಟ್ಟಿಯ ಮೇಲೆ ತೋಳದಾಳಿ ಮಾಡಿ ಸುಮಾರು 25ಕ್ಕೂ ಹೆಚ್ಚು ಕುರಿಗಳನ್ನು ತಿಂದು ಹಾಕಿದ್ದು ಕುರಿಗಾಯಿ ನಷ್ಟ ಅನುಭವಿಸುವಂತಾಗಿದೆ,**



ಕುರಿಗಳ ಸಾವಿನಿಂದ ಕಂಗೆಟ್ಟಿರುವ ಕುರಿಗಾಯಿಗಳಿಗೆ ಸರ್ಕಾರ ಪರಿಹಾರ ನೀಡಬೇಕು ಎಂದು ಮನವಿ ಮಾಡಿದ್ದಾರೆ. ಸ್ಥಳಕ್ಕೆ ಪಾಮನಕಲ್ಲೂರು ಪಶುವೈದ್ಯಾಧಿಕಾರಿ ಡಾ.ಸುಬ್ಬಯ್ಯ ಭೇಟಿ ನೀಡಿ ಪರಶೀಲಿಸಿದ್ದು ಮುಂದಿನ ಕ್ರಮಕ್ಕೆ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

# ಶರಣ ಮಡಿವಾಳ ಮಾಚಿದೇವರ ಜಯಂತಿ ಆಚರಣೆ



❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಶರಣ ಶ್ರೀ ಮಡಿವಾಳ ಮಾಚಿದೇವರ ಜಯಂತೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.**

ಕಾರ್ಯಕ್ರಮದಲ್ಲಿ ಸಂಸ್ಥಾಪಕ ಅಧ್ಯಕ್ಷ ಸಿದ್ದನಗೌಡ ಬ. ಮಂಗಳೂರ ಅವರು ಶ್ರೀ ಮಡಿವಾಳ ಮಾಚಿದೇವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪ ನಮನ ಅರ್ಪಿಸಿ ಮಾತನಾಡಿ ಶ್ರೀ ಮಡಿವಾಳ ಮಾಚಿದೇವರು ಮೇಲು-ಕೀಳು ಹಾಗೂ ಮೂಢನಂಬಿಕೆಗಳನ್ನು ಧಿಕ್ಕರಿಸಿ ಸಮಾಜಕ್ಕೆ ಸಮಾನತೆಯ ಸಂದೇಶ ಸಾರಿದ್ದಾರೆ. ಅವರ ಜೀವನ ಸಂದೇಶಗಳನ್ನು ಅರಿತು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಗುರುಗಳಾದ ಸಂತೋಷ ಪವಾರ, ಶಿಕ್ಷಕರಾದ ರಾಜು ಜವಳಗೇರಿ, ಬಸವರಾಜ ಸವದತ್ತಿ,ಭೀಮನಗೌಡ ಸಾಸನೂರ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಮಸ್ಕಿ ಪೊಲೀಸ್ ಠಾಣೆ ಹಳೆಯ ಪಿ ಸಿ ವಸತಿಗೃಹಗಳ ನೆಲಸಮ ಬಹಿರಂಗ ಹರಾಜು

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ ಪೊಲೀಸ್ ಠಾಣೆಯ ಪೊಲೀಸರ ವಸತಿಗೃಹಗಳ ಕಟ್ಟಡಗಳು ನಿರ್ಮಾಣ ಮಾಡಿ ಅಂದಾಜು 50 ವರ್ಷಕ್ಕೂ ಅಧಿಕವಾಗಿದ್ದು , ಹೀಗಾಗಿ ಪೊಲೀಸ್ ಇಲಾಖೆಯ ಕಟ್ಟಡಗಳು ಸಂಪೂರ್ಣ ಶೀತಲಾವಸ್ತೆಯಲ್ಲಿದ್ದು ಅದಕ್ಕಾಗಿ ಅವುಗಳನ್ನ ನೆಲಸಮಾಡಲು ಬೆಂಗಳೂರು ಪೊಲೀಸ್ ಪ್ರಧಾನ ಕಚೇರಿಯಿಂದ ಪತ್ರಿಕೆಯಲ್ಲಿ ಪ್ರಕಟವಾದ ಆದೇಶ ನೀಡಿದ ಹಿನ್ನೆಲೆಯಲ್ಲಿ,**

ಮಸ್ಕಿ ಸರ್ಕಲ್ ಇನ್ಸ್ಪೆಕ್ಟರ್ ರಾಮಣ್ಣ ಜಲಗಾರ ಮತ್ತು ಪಿಎಸ್ಐ ರಂಗಯ್ಯ ಕೆ ನೇತೃತ್ವದಲ್ಲಿ ಪೊಲೀಸ್ ಠಾಣಾ ಆವರಣದಲ್ಲಿ ಬಹಿರಂಗ ಹರಾಜು ಪ್ರಕ್ರಿಯೆ ನಡೆಯಿತು. ಒಟ್ಟು ಏಳು ಜನ ಆಸಕ್ತ ಬಿಡ್ ದಾರರು ಪಾಲ್ಗೊಂಡಿದ್ದರು. ಸರ್ಕಾರಿ ನಿಗದಿತ ಬಿಟ್ ಮೊತ್ತ 90500 ರೂಪಾಯಿ ಆಗಿತ್ತು, ತೀವ್ರ ಸ್ಪರ್ಧೆ ನಡುವೆ



ಬಿ ನಾಗರಾಜ್ ಅವರು 99000 ರೂಪಾಯಿ ಮೊತ್ತಕ್ಕೆ ಅಂತಿಮ ಬಿಡ್ ಸಲ್ಲಿಸಿ ಹರಾಜನ್ನು ತಮ್ಮ ಹೆಸರಿಗೆ ಪಡೆದರು.

ಈ ಒಂದು ಹರಾಜು ಪ್ರಕ್ರಿಯೆ ಸಂಪೂರ್ಣ ಪಾರದರ್ಶಕತೆ ಮತ್ತು ನಿಯಮನುಸಾರದಿಂದ ಪಿಎಸ್ಐ ರಂಗಯ್ಯ ಕೆ ಮತ್ತು ಸಿಬ್ಬಂದಿಗಳು ನಡೆಸಿದರು. ಮುಂದಿನ ದಿನಗಳಲ್ಲಿ ಹಳೆಯ ಕಟ್ಟಡಗಳನ್ನು ನೆಲಸಮಾಡಿ, ಹೊಸ ಕಟ್ಟಡ ನಿರ್ಮಾಣ ಕಾರ್ಯಕ್ಕೆ ಅವಕಾಶ ಕಲ್ಪಿಸಲಾಗವುದು ಎನ್ನಲಾಗಿದೆ.

# ಬೈಕ್‌ಗೆ ಟಿಪ್ಪರ್ ಡಿಕ್ಕಿ ಸವಾರ ಸಾವು

❑ ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣದ ಹೊರವಲಯದಲ್ಲಿ ರಾತ್ರಿ ವೇಳೆ ಟಿಪ್ಪರ್ ಡಿಕ್ಕಿ ಹೊಡೆದು ಬೈಕ್ ಸವಾರ ಸ್ಥಳದಲ್ಲಿಯೇ ಮೃತಪಟ್ಟ ಘಟನೆ ಇಂದು ನಡೆದಿದೆ.**

ಮೃತ ವ್ಯಕ್ತಿಯನ್ನು ದೇವದುರ್ಗ ತಾಲ್ಲೂಕಿನ ಸಡಕಲಗುಡ್ಡ ಗ್ರಾಮದ ಬಸವರಾಜ ತಂದೆ ರಂಗಯ್ಯ(32) ಎಂದು ಗುರುತಿಸಲಾಗಿದ್ದು, ಮೃತನು ಸಡಕಲಗುಡ್ಡ ಗ್ರಾಮದಿಂದ ಪಾಮನಕಲ್ಲೂರು ಗ್ರಾಮದ ಹೆಂಡತಿ ಮನೆಗೆ ಹೊರಟಿದ್ದಾಗ ಎದುರಿನಿಂದ ಬಂದ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಲ್ಲಿ ಕೆಲಸ ನಿರ್ವಹಿಸುವ ಇನ್‌ಫ್ರಾ ಸ್ಟ್ರಕ್ಚರ್ ಕಂಪನಿಗೆ ಸೇರಿದ ಟಿಪ್ಪರ್ ಡಿಕ್ಕಿ ಹೊಡೆದು ರಸ್ತೆ



ಪಕ್ಕದಲ್ಲಿ ಉರುಳಿ ಬಿದ್ದಿದೆ ಡಿಕ್ಕಿ ರಬಸಕ್ಕೆ ಬೈಕ್ ಸಂಪೂರ್ಣ ನುಜ್ಜುಗುಜ್ಜಾಗಿದ್ದು ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆ. ಸ್ಥಳಕ್ಕೆ ಕವಿತಾಳ ಪೊಲೀಸರು ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತನಿಗೆ ಹೆಂಡತಿ, ಮೂರು ಮಕ್ಕಳು ಇದ್ದು ಕುಟುಂಬಸ್ಥರ ಅಕ್ರಂದನ ಮುಗಿಲು ಮುಟ್ಟಿದೆ.

# ಕಲ್ಯಾಣ ಕರ್ನಾಟಕದಲ್ಲಿ ಕಾರುಣ್ಯಾಶ್ರಮ ಕರುಣೆಯ ಕುಟುಂಬವಾಗಿದೆ :ಡಾ. ಸರಸ್ವತಿ ಪಾಟೀಲ್ ಕಾಸರಡ್ಡಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸೌರಭ ಸಂಸ್ಕೃತಿಕ ಕಲಾ ಬಳಗ(ರಿ)ಹಿರೇಮನ್ನಾಪುರ ಹಾಗೂ ಮೈಸೂರು ಬೆಂಗಳೂರು ಕಲಾ ಬಳಗದ ವತಿಯಿಂದ ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದ ಲಿಂಗೈಕ್ಯ ಶ್ರೀ ಡಾ.ಪಂಚಾಕ್ಷರಿ ಗವಾಯಿಗಳ 134ನೇ ಜಯಂತೋತ್ಸವ ಕಾರ್ಯಕ್ರಮವನ್ನು ಶ್ರೀಗಳ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಹಲವಾರು ಕಲಾವಿದರುಗಳ ಗಣ್ಯಾತಿಗಣ್ಯರ ನೇತೃತ್ವದಲ್ಲಿ ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ " ಸಂಗೀತ ಸೌರಭ" ಕಾರ್ಯಕ್ರಮವನ್ನು ಆಶ್ರಮದ ಸದಸ್ಯರಾದ ಡಾ. ಮಲ್ಲಿಕಾರ್ಜುನ ಹಿರೇಮಠ ಕರಡಕಲ್ ಇವರ ಮಾತೋಶ್ರೀಗಳಾದ ಉಮಾದೇವಿ ಹಿರೇಮಠ ಇವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ನೆರವೇರಿಸಲಾಯಿತು.**

ಈ ಕಾರ್ಯಕ್ರಮದಲ್ಲಿ ಕಾರುಣ್ಯ ಆಶ್ರಮಕ್ಕೆ ಸ್ವಂತ ಜಾಗ ಹಾಗೂ ಅನುದಾನ ಸಿಗಲಿ ಎನ್ನುವ ಬೇಡಿಕೆಯೊಂದಿಗೆ ಸುಮಾರು 25 ದಿನಗಳ ಕಾಲ



ಯಾತ್ರೆ ಮಾಡಿ ಕಾರುಣ್ಯ ಕುಟುಂಬಕ್ಕೆ ಆಗಮಿಸಿದ ಮಹಾದೇವಿ ಹಿರೇಮಠ ಅವರನ್ನು ಆಶ್ರಮದಲ್ಲಿ ಪಾದಪೂಜೆ ಮಾಡಿ ಗೌರವಿಸಲಾಯಿತು. ನಂತರ ರಾಜ್ಯ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ಸರಸ್ವತಿ ಪಾಟೀಲ್ ಕಾಸರಡ್ಡಿ ಇವರನ್ನು ಆಶ್ರಮದಲ್ಲಿ ಸನ್ಮಾನಿಸಿ ಗೌರವಿಸಿ ಆಶೀರ್ವದಿಸಲಾಯಿತು.ಈ ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ಸರಸ್ವತಿ ಪಾಟೀಲ್ ಕಾಸರಡ್ಡಿ ಮಾತನಾಡಿ ನಮ್ಮ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾರುಣ್ಯ ಆಶ್ರಮದ ಜನನ ಸಿಂಧನೂರಿನ ಕರುಣೆಯ ಶಕ್ತಿಯನ್ನು ಜಗತ್ತಿಗೆ ತೋರಿಸಿಕೊಟ್ಟಿದೆ.

ಹರೇಟನೂರು ಹಾಗೂ ಲಿಂಗಸುಗೂರಿನ ಕರಡಕಲ್ ಈ ಎರಡು ಜಂಗಮ ಕುಟುಂಬ ಜಂಗಮನ ಒಬ್ಬ ವ್ಯಕ್ತಿ ಎಲ್ಲಾ ಅದು ಸಮಾಜದ ಶಕ್ತಿ ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ.ಇಂತಹ ಕಾರ್ಯಕ್ಕೆ ಸಹಾಯ ಸಹಕಾರ ಮಾಡುವ ದಾನಿಗಳು ಅಂದ ಅನಾಥರ ಬಾಳಿಗೆ ಆಶಾಕಿರಣ ವಾಗಿದ್ದಾರೆ. ಮುಂದಿನ ದಿನಮಾನಗಳಲ್ಲಿ ಕಾರುಣ್ಯ ಆಶ್ರಮಕ್ಕೆ ನಮ್ಮ ನಿರಂತರ ಸಹಾಯ ಸಹಕಾರವಿರುತ್ತದೆ. ಮತ್ತು ಸರ್ಕಾರದ ಮೂಲಕ ಸ್ವಂತ ಜಾಗ ಹಾಗೂ ಅನುದಾನ ಕೊಡಿಸುವ ನಿಟ್ಟಿನಲ್ಲಿ ನಾನು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ ಎಂದು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಹಿರೇಮನ್ನಾಪುರದ ಭೀಮಸೇನ ಕುಲಕರ್ಣಿ ಅವರು ಆಶ್ರಮದ ಸೇವೆಯ ಬಗ್ಗೆ ಸಾಹಿತ್ಯ ಬರೆದು ಹಾಡುವ ಮೂಲಕ ಸಮಾಜದ ಗಮನ ಸೆಳೆದರು. ಈ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಉಮಾದೇವಿ ಹಿರೇಮಠ ಕರಡಕಲ್ ವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ವೇ.ಮೂ. ವಿಶೇಷ ಯಡಿಯೂರು ಮಠ ಶ್ರೀ ಶಾಂಭವಿ ಪುಣ್ಯಾಶ್ರಮ ಸಿಂಧನೂರು.ಡಾ. ಬಾಲಚಂದ್ರಪ್ಪನವರು ದಿವ್ಯ ಸಾನಿಧ್ಯ ಶಂಕರಲಿಂಗ ಮಠ ಹಿರೇಮನ್ನಾಪುರ, ಡಾ.ಸರಸ್ವತಿ ಪಾಟೀಲ್ ಕಾಸರಡ್ಡಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿ. ಡಾ.ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಸದಸ್ಯರು ಕಾರುಣ್ಯ ಆಶ್ರಮ.ಆಮೀನಾ. ಓ. ಕೊಡಗು, ಶ್ರೀಯುತ ಬಾಳಪ್ಪ, ಸಂತೋಷ್ ಅಂಗಡಿ ರಾಜ್ಯಾಧ್ಯಕ್ಷರು ಕರ್ನಾಟಕ ಯುವಶಕ್ತಿ ಸೇವಾ ಟ್ರಸ್ಟ್. ರೆಹಮಾನ್ ಸಾಬ್,ಭೀಮಸೇನರಾವ್ ಕುಲಕರ್ಣಿ ಬಷೀರ್ ಅಹ್ಮದ್ ಶಿವಮೊಗ್ಗ ಖಾಸಿಂ ಅಲಿ ಕೊಪ್ಪಳ,ರೇಣುಕಾ ಆರಾಧ್ಯ ಮೈಸೂರು. ಬಕ್ಷಿ ದರವೇಶ ಕಲಾವಿದರು ಸಿಂಧನೂರು. ವಿಶಾಲಾಕ್ಷಿ ಹಿರೇಮಠ ಕಲಾವಿದರು ಸಿಂಧನೂರು. ವೀರೇಶ ದೇವರಮನ ಕಲಾವಿದರು ಸಿಂಧನೂರು. ಪಂಪನಗೌಡ ಹರೇಟನೂರು. ಅಂಬುಜಾ ತಾಲೂಕ ಅಧ್ಯಕ್ಷರು ಲಿಂಗಸುಗೂರು ತಾಲೂಕು ರೈತ ಸಂಘ. ಬಸವರಾಜ ರೈತ ಸಂಘದ ಮುಖಂಡರು ಲಿಂಗಸೂಗೂರು.ಮಾಳಪ್ಪ ಮಾಡಗಿರಿ ವೀರಭದ್ರಗೌಡ ಗಿಣಿವಾರ.. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸಯ್ಯಸ್ವಾಮಿ ಹಿರೇಮಠ. ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದ ಗುಡ್ಡ ಸಿದ್ದಯ್ಯ ಸ್ವಾಮಿ ಮರಿಯಪ್ಪ ಜ್ಯೋತಿ ಹಾಗೂ ರಾಜ್ಯದ ವಿವಿಧ ಕಲಾವಿದರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ಎಲ್ಲರಂತವನಲ್ಲ ನನ್ನಗಂಡ.!

ಎಲ್ಲರಂತವನಲ್ಲಮ್ಮ ನನಗಂಡ
ಪ್ರೀತಿ ಪರಾಕಾಷ್ಟೆಯ ಉದ್ದಂಡ.!

ಮನೆಯಲಡುಗೆ ಮಾಡಿ ಮಾಡಿ
ಬೇಸರವಾಯ್ತೆಂದು ನೊಂದರೆ..
ಆಗದೆಂದು ಆಲಸ್ಯ ಮಾಡಿದರೆ..
ಕರೆದೊಯ್ಯುವನು ನನ್ನ ಹೊರಗೆ
ಅವನಿಷ್ಟದಾ ಅದೇ ಹೋಟೇಲಿಗೆ.

ಪ್ರೀತಿಯಲಿ ಜೊತೆ ಕೂತುಕೊಂಡು
ಎಲ್ಲವೂ ನಿನಗೆ ನಿನಗೆ ಎನ್ನುತ್ತಲೇ
ತನ್ನಿಷ್ಟದಾ ತಿಂಡಿಗಳನೇ ತರಿಸುವನು
ನನಗಿಂತ ಹೆಚ್ಚಾಗಿ ಮೊದಲವನೇ
ಎಲ್ಲ ಗಡದ್ದಾಗಿ ತಿಂದು ತೇಗುವನು.!

ಎಲ್ಲರಂತವನಲ್ಲಮ್ಮ ನನಗಂಡ
ಸತಿವಾಕ್ಯ ಪರಿಪಾಲನೆ ಕೋದಂಡ.!

ಒಮ್ಮೊಮ್ಮೆ ಮನೆಗೆಲಸ ಹೆಚ್ಚಾಗಿ
ಆಯಾಸವೆಂದು ಅವಲತ್ತುಕೊಂಡರೆ
ವಿಶ್ರಮಿಸಬೇಕೆಂದು ಹೇಳಿಕೊಂಡರೆ
ಕರೆದೊಯ್ಯುವನು ಅಕ್ಕರಾಸ್ಥೆಯಲಿ
ಲಾಲಿಸುತ ನನ್ನ ಮಲಗುಕೋಣೆಗೆ.!

ಮಲಗು ಮಲಗೆಂದು ಹೇಳುತ್ತಾ..
ನಿದ್ರಿಸು ನಾನೆಲ್ಲ ಮಾಡುವೆನೆನುತ್ತಾ
ತಲೆ ನೇವರಿಸಿ ತಟ್ಟುತ್ತಾ ತಟ್ಟುತ್ತಾ
ಕ್ಷಣಾರ್ಧದಿ ನನಗಿಂತ ಮೊದಲವನೇ
ಮಲಗಿ ಗೊರಕೆ ಹೊಡೆಯುವನು.!

ಎಲ್ಲರಂತವನಲ್ಲಮ್ಮ ನನಗಂಡ
ಪತಿಧರ್ಮ ಬೆಳಗುವ ಮಾರ್ತಂಡ.!


ತವರುಮನೆ ನೆನಪಾಗಿ ಕಣ್ಣೀರಿಟ್ಟರೆ
ಮರುದಿನವೇ ಕರೆದೊಯ್ಯುವನು
ನಮ್ಮಪ್ಪನ ಮನೆಯಲ್ಲಿ ನನ್ನೊಂದಿಗೇ
ಉಪಚಾರ ಸತ್ಕಾರ ಮಾಡಿಸಿಕೊಂಡು
ವಾರಪೂರ್ತಿ ಠಿಕಾಣಿ ಹೂಡುವನು.!

ಎ.ಎನ್.ರಮೇಶ್. ಗುಬ್ಬಿ.

## ಮೆಕ್ಕೆಜೋಳ ನೋಂದಣಿ ವಿಸ್ತರಣೆ

ನೈಜ್ಯ ದೆಸೆ ನ್ಯೂಸ್

ಜಿಲ್ಲೆಯಲ್ಲಿ 2025–26 ನೇ ಸಾಲಿಗೆ ಮುಂಗಾರು ಹಂಗಾಮಿಗೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ಮೆಕ್ಕೆಜೋಳ ಉತ್ಪನ್ನಕ್ಕೆ ರೈತರಿಗೆ ಬೆಲೆ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ಉದ್ದೇಶಿಸಲಾಗಿದ್ದು,



ಈಗಾಗಲೇ ನೋಂದಣಿಗೆ ಅವಕಾಶ ಕಲ್ಪಿಸಲಾಗಿತ್ತು. ರಾಜ್ಯ ಸರ್ಕಾರವು ರೈತರು ನೋಂದಣಿ ಮಾಡಿಕೊಳ್ಳುವ ಅವಧಿಯನ್ನು ಫೆ.13 ರ ವರೆಗೆ ಹಾಗೂ ಏಕೀಕೃತ ಮಾರುಕಟ್ಟೆ ವ್ಯವಸ್ಥೆ ವೇದಿಕೆ ಮೂಲಕ ಕೃಷಿ ಉತ್ಪನ್ನ ಮಾರುಕಟ್ಟೆ ಮೂಲಕ ಮಾರಾಟ ಮಾಡಿಕೊಳ್ಳಲು ಫೆ.21 ಕೊನೆಯ ದಿನ ಎಂದು ಅವಧಿ ವಿಸ್ತರಿಸಿದೆ. ರೈತರು ನಿಗದಿತ ಅವಧಿಯಲ್ಲಿ ನೋಂದಣಿ ಮತ್ತು ಮಾರಾಟ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಕೃಷಿ ಮಾರಾಟ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

## ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪ್ರತಿಭಾನ್ವೇಶಣೆ ಕಾರ್ಯಕ್ರಮ: ರಮೇಶಬಾಬು ಯಾಳಗಿ

ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಕಲ್ಮಠ ಪದವಿ ಪೂರ್ವ ಕಾಲೇಜಿನಲ್ಲಿ ಲಿಂ.ಡಾ.ಶಿವಮೂರ್ತಿಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯಸ್ಮರಣೆ ಅಂಗವಾಗಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವ ಸಿದ್ದತೆ ಹಾಗೂ ಪ್ರತಿಭಾನ್ವೇಶಣೆ ಕಾರ್ಯಕ್ರಮದಲ್ಲಿ ಲಿಂ.ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಭಾವಚಿತ್ರಕ್ಕೆ ಪುಷ್ಪ ಸಲ್ಲಿಸಿ ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಉಪನ್ಯಾಸ ನೀಡಿ ಹಿರಿಯ ಸಾಹಿತಿ ರಮೇಶಬಾಬು ಯಾಳಗಿ ಮಾತನಾಡಿ ವಿದ್ಯಾರ್ಥಿಗಳು ಶಾಲೆಯಲ್ಲಿ ಶಿಕ್ಷಕರು ಹೇಳುವ ಪಠ್ಯಕ್ರಮವನ್ನು ಚೆನ್ನಾಗಿ ಅರ್ಥ ಮಾಡಿಕೊಂಡು, ಪ್ರತಿ ವಿಷಯಕ್ಕೂ ನಿರ್ದಿಷ್ಟ ಸಮಯ ನಿಗದಿಪಡಿಸಿಕೊಂಡು, ನಿಯಮಿತವಾಗಿ ಅಭ್ಯಾಸ ಮಾಡುವುದರಿಂದ ಮತ್ತು ಹಳೆಯ ಪರೀಕ್ಷೆಗಳ



ಪ್ರಶ್ನೆಪತ್ರಿಕೆಗಳನ್ನು ಬಿಡಿಸುವುದರಿಂದ ಪರೀಕ್ಷೆಯ ಮಾದರಿ ತಿಳಿಯುತ್ತದೆ ಮತ್ತು ಆತ್ಮವಿಶ್ವಾಸ ಹೆಚ್ಚುತ್ತದೆ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ಕೊಳ್ಳುವುದಕ್ಕೆ ಕೂಡ ಸಾಧ್ಯವಾಗುತ್ತದೆ. ಜೀವನದ ಪ್ರತಿ ಕ್ಷಣದಲ್ಲಿಯು ಕೂಡ ಅನೇಕ ಪರೀಕ್ಷೆಗಳನ್ನುನಾವುಗಳು ಎದು–ರಿಸಬೇಕಾಗುತ್ತದೆ ಅದ್ದರಿಂದ ಸೋಲು ಮತ್ತು ಗೆಲುವುಗಳನ್ನು ಸಹಜವಾಗಿ ಸ್ವೀಕರಿಸಿದಾಗ ಮಾತ್ರ ಜೀವನದಲ್ಲಿ ಯಶಸ್ಸನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸಂಸ್ಥೆಯ ಆಡಳಿತಾಧಿಕಾರಿ ಸಂಗಯ್ಯಸ್ವಾಮಿ ಮಾತನಾಡಿ ಪ್ರತಿ ವರ್ಷ ಕಲ್ಮಠ ಕಾಲೇಜು ವತಿಯಿಂದ ತಾಲೂಕಿನ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಗೆ ಪ್ರತಿಭ ಆನ್ವೇಶಣಾ ಪರೀಕ್ಷೆಯನ್ನು ನಡೆಸಿ ಪ್ರತಿಭವಂತ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕೆ ಅನುಕೂಲವಾಗುವಂತೆ ಅತಿ ಹೆಚ್ಚು ಅಂಕಗಳನ್ನು ಪಡೆದ ಕನ್ನಡ ಹಾಗೂ ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳಿಗೆ ಪ್ರಥಮ ಬಹುಮಾನವಾಗಿ 15 ಸಾವಿರ ರೂ ಹಾಗೂ ದ್ವೀತಿಯ ಬಹುಮಾನವಾಗಿ 10 ಸಾವಿರ ರೂ ನೀಡಿ ಸನ್ಮಾನಿಸಿ ಗೌರವಿಸಲಾಗುವುದು ಎಂದು ತಿಳಿಸಿದರು.

ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಎಸ್.ಎಸ್.ಪಾಟೀಲ ,ಕಲ್ಮಠ ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯ ಕೆಮ್ಮಾನಾಯಕ, ಪ್ರೌಢಶಾಲಾ ಮುಖ್ಯೋಪಾಧ್ಯಾಯ ಪ್ರಭಯ್ಯ ಸ್ವಾಮಿ, ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಸಿದ್ದನಗೌಡ ಪಾಟೀಲ, ಎನ್.ಎಸ್.ಎಸ್.ಅಧಿಕಾರಿ ವಿರುಪಣ್ಣ ಪಾಟೀಲ್ ಉಪನ್ಯಾಸಕ ಅಯ್ಯಪ್ಪ ವಿಶ್ವಕರ್ಮ, ಹನುಮಂತಪ್ಪ ಇದ್ದರು.

## ಶರಣರ ನುಡಿಗಳು ನಿಜ ಜೀವನದಲ್ಲಿ ಅಳವಡಿಸಿಕೊಳ್ಳಿ ಮುಖ್ಯ ಗುರು ಸತೀಶ್



ನೈಜ್ಯ ದೆಸೆ ನ್ಯೂಸ್

ಮಾನ್ವಿ: 12ನೇ ಶತಮಾನದಲ್ಲಿ ಶರಣರು ನುಡಿದ ಪ್ರಕಾರ ಎಲ್ಲರೂ ಒಂದೇ ಎಲ್ಲರೂ ಸಮಾನರು ಆದರೆ ಇಂದು 21ನೇ ಶತಮಾನ ನಾವು ಶರಣರ ವಿರುದ್ಧ ನಡೆಯುತ್ತಿದ್ದೇವೆ ಅಸ್ಪೃಶ್ಯತೆ ವಿರುದ್ಧ ಹೋರಾಡಿದ ಶರಣರು ಅವರ ಕಂಡ ಕನಸುಗಳು ನುಚ್ಚುನೂರಾಗಿವೆ ಕಾರಣ ಎಲ್ಲರೂ ಎಚ್ಚೆತ್ತುಕೊಂಡು ಎಲ್ಲರಲ್ಲಿಯೂ ಸಮಾನತೆ ಕಾಣಬೇಕೆಂದು ಪ್ರಭಾರಿ ಮುಖ್ಯ ಗುರುಗಳು ಸತೀಶ್ ಸಿಎಂ ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ಹೇಳಿದರು.

ಇದಕ್ಕೂ ಮೊದಲು ಪಿಎಮ್ ಶ್ರೀ ವಿದ್ಯಾರ್ಥಿಗಳು ಶಿಕ್ಷಕರು ಹಾಗೂ ಅತಿಥಿ ಶಿಕ್ಷಕರು ಗ್ರಾಮದ ಮುಖಂಡರು ಎಸ್ ಡಿ ಎಂ ಸಿ ಪದಾಧಿಕಾರಿಗಳು ಮಡಿವಾಳ ಸಮಾಜದ ಯುವಕರು ಹಾಗೂ ಗ್ರಾಮ ಪಂಚಾಯತಿಯ ಸದಸ್ಯರು ಮಡಿವಾಳ ಮಾಚಿದೇವರ ಭಾವಚಿತ್ರಕ್ಕೆ ಮಾಲಾರ್ಪಣೆ ಪೂಜೆ ನೆರವೇರಿಸಿ ಮಾಚಿದೇವರ ಬಗ್ಗೆ ವಿದ್ಯಾರ್ಥಿ ವೆಂಕೋಬ ನಾಯಕ ಬೇವನೂರು ಮಾತನಾಡಿ ಕ್ರಿಸ್ತಶಕ 1120ರಲ್ಲಿ ಪರ್ವತಯ್ಯ ಮತ್ತು ಸುಜ್ಞಾನಮ್ಮ ದಂಪತಿಗಳ ಮಗನಾಗಿ ಜನಿಸಿ ವೃತ್ತಿ ಯಲ್ಲಿ ಮಡಿವಾಳನ ಕೆಲಸ ಅವರ ದೀಕ್ಷಾ ಗುರು ಮಲ್ಲಿಕಾರ್ಜುನ ಇಷ್ಟ ದೈವ ಕಲ್ಲಿನಾಥ ಕಲಿದೇವರದೇವ ಎಂಬ ಅಂಕಿತದಲ್ಲಿ 354 ವಚನಗಳನ್ನು ಬರೆದಿದ್ದಾರೆ.

ಅರಸುತನ ಮೇಲಲ್ಲ ಅಗಸತನ ಕೀಳಲ್ಲ ಎಂಬುದನ್ನು ಈ ಸಮಾಜಕ್ಕೆ ಸಾರಿದರು ಅಗಸ ಮುನಿಯುವುದು ಮಲಿನಕ್ಕೆ ವಸ್ತ್ರಕ್ಕಲ್ಲ ಶರಣ ಮುನಿಯುವುದು ಅವಗುಣಕ್ಕೆ ಶಿವ ಭಕ್ತಗಲ್ಲ ನಾನೆಂಬುದು ಮರೆತುಬಿಡಿ. ಆಗ ಪುಟವಿಟ್ಟ ಚಿನ್ನದಂತೆ ನಿಮ್ಮ ಭಕ್ತಿ ಇನ್ನಷ್ಟು ಥಳಥಳಿಸುತ್ತದೆ ಈ ಸಂದರ್ಭದಲ್ಲಿ ಮಡಿವಾಳ ಸಮಾಜದ ಯುವಕರು ಶಾಲೆ ಮಕ್ಕಳಿಗೆ ಮಾಚಿದೇವರ ಜಯಂತಿ ಅಂಗವಾಗಿ ಆಟಗಳಲ್ಲಿ ಭಾಗವಹಿಸಿದ ಮಕ್ಕಳಿಗೆ ನೋಟ್ ಬುಕ್ ವಿತರಿಸಿದರು ಲಕ್ಷ್ಮಿ ಟೀಚರ್ ನಿರೋಪಿಸಿದರೆ ರತ್ನಮ್ಮ ವಂದಿಸಿದರು

## ಯುವ ಹಾಫಿಜ್–ಇ–ಕುರಾನ್ ಹಾಫಿಜ್ ಸೈಯದ್ ಮೊಹಮ್ಮದ್ ಮೊಹಮ್ಮದಲ್ ರೆಹಾನ್ ಹುಸೇನಿ ಮತ್ವಾಲೆ

ನೈಜ್ಯ ದೆಸೆ ನ್ಯೂಸ್

ಮಾನವಿ: ಅತ್ಯಂತ ಕೋಮಲ ವಯಸ್ಸಿನಲ್ಲಿ ಪವಿತ್ರ ಕುರಾನ್ ಅನ್ನು ಸಂಪೂರ್ಣವಾಗಿ ಕಂಠಪಾಠ ಮಾಡಿರುವುದು ಅಪರೂಪದ ಹಾಗೂ ಶ್ಲಾಘನೀಯ ಸಾಧನೆಯಾಗಿದ್ದು, ಇದು ಅವರ ಅಪೂರ್ವ ಸ್ಮರಣಶಕ್ತಿ, ಅಚಲ ಪರಿಶ್ರಮ, ಕಟ್ಟುನಿಟ್ಟಿನ ಶಿಸ್ತು ಮತ್ತು ಆಳವಾದ ಇಮಾನಕ್ಕೆ ಜೀವಂತ ಸಾಕ್ಷಿಯಾಗಿದೆ. ದಿನನಿತ್ಯದ ನಿಯಮಿತ ಅಧ್ಯಯನ, ತ್ಯಾಗ ಮತ್ತು ಅಲ್ಲಾಹ್ ಮೇಲಿನ ಅಚಲ ಭರವಸೆಯ ಫಲವಾಗಿ ಈ ಉದಾತ್ತ ಸಾಧನೆ ಸಾಧ್ಯವಾಗಿದೆ.

ಪವಿತ್ರ ಕುರಾನ್ ಅನ್ನು ಹೃದಯದಲ್ಲಿ ಧಾರಣೆ ಮಾಡಿರುವುದು ಮಹಾನ್ ಗೌರವವಾಗಿರುವುದರೊಂದಿಗೆ, ಅದೇ ಸಮಯದಲ್ಲಿ ಭಾರೀ ಜವಾಬ್ದಾ–ರಿಯನ್ನೂ ಒಳಗೊಂಡಿದೆ. ಹಾಫಿಜ್ ರೆಹಾನ್ ಹುಸೇನಿ ಅವರು ತಮ್ಮ ಜೀವನದ ಪ್ರತಿಯೊಂದು ಹಂತದಲ್ಲೂ ಕುರಾನ್‌ನ ಉಪದೇಶಗಳನ್ನು ಅನುಸರಿಸಿ, ತಮ್ಮ ನಡತೆ, ಚಿಂತನೆ ಮತ್ತು ಸೇವೆಯ ಮೂಲಕ ಸಮಾಜಕ್ಕೆ ದಿವ್ಯ ಬೆಳಕಾಗಿ ಪರಿಣಮಿಸುವಂತೆ ಅಲ್ಲಾಹ್



(SWT) ಅವರಿಗೆ ತೌಫೀಕ್ ನೀಡಲಿ. ಈ ಮಹಾನ್ ಸಾಧನೆಯು ಹಜರತ್ ಮತ್ವಾಲೆ ಹುಸೇನಿ ಸಾಹೇಬ್ ಅವರ ಗೌರವಾನ್ವಿತ ಗುರುಕುಟುಂಬಕ್ಕೂ, ಧಾರ್ಮಿಕ ಶಿಕ್ಷಕರಿಗೂ ಹಾಗೂ ಇಡೀ ಸಮುದಾಯಕ್ಕೂ ಅಪಾರ ಸಂತೋಷ ಮತ್ತು ಹೆಮ್ಮೆಯ ವಿಷಯವಾಗಿದೆ.

ಇದು ಮುಂದಿನ ತಲೆಮಾ–ರಿಗೆ ಪ್ರೇರಣೆಯಾಗುವ ಶಾಶ್ವತ ದಿವ್ಯ ಮಾದರಿಯಾಗಿದೆ. ಅಲ್ಲಾಹ್ (SWT) ಅವರು ಹಾಫಿಜ್ ರೆಹಾನ್ ಹುಸೇನಿ ಅವರನ್ನು ಸದಾ ಹಿಫ್ಜ್‌ನ ಅಮಾನತ್ತಿಗೆ ಅರ್ಹನಾಗಿರಿಸಲಿ, ಅವರಿಗೆ ದೀರ್ಘಾಯುಷ್ಯ, ಉತ್ತಮ ಆರೋಗ್ಯ, ವಿಶಾಲ ಜ್ಞಾನ, ವಿವೇಕ ಹಾಗೂ ಶ್ರೇಷ್ಠ ಇಸ್ಲಾಮಿಕ್ ಚಾರಿತ್ರ್ಯವನ್ನು ದಯಪಾಲಿಸಲಿ. ಪವಿತ್ರ ಕುರಾನ್ ಅವರ ಹೃದಯದಲ್ಲಿ ಸದಾ ಬೆಳಕಾಗಿ ಪ್ರಕಾಶಿಸಿ, ಅವರ ಜೀವನಪಥದ ಪ್ರತಿಯೊಂದು ಹೆಜ್ಜೆಯಲ್ಲೂ ದಿವ್ಯ ಮಾರ್ಗದರ್ಶಿಯಾಗಿರಲಿ. ಆಮೀನ್ ಯಾ ರಬ್ಬಲ್ ಆಲಮೀನ್. ಅಭಿನಂದನೆಗಳು ಮತವಾಲೆ ಸಾಹೇಬ್ ಗುರುಗಳು ಕುಟುಂಬದಿಂದ.

# ಎಪಿಎಂಸಿ ವಹಿವಾಟು ಸ್ಥಗಿತ



ನೈಜ್ಯ ದೆಸೆ ನ್ಯೂಸ್

ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸ)ಯ ಪರವಾನಗಿದಾರ ಹಮಾಲರ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿ ಹಮಾಲರ ಸಂಘ ಸೋಮವಾರ ಮುಷ್ಕರ ಆರಂಭಿಸಿತು. ಹೀಗಾಗಿ ಮಾರುಕಟ್ಟೆಯಲ್ಲಿ ವಹಿವಾಟು ಸ್ಥಗಿತಗೊಂಡಿತು. ವರ್ತಕರು ನಮ್ಮ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತಿದ್ದಾರೆ ಎಂದು ಹಮಾಲರು ದೂರಿದರು. ಯಾವುದನ್ನೇ ಆಗಲಿ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು. ಮುಷ್ಕರ ಎಲ್ಲದಕ್ಕೂ ಪರಿಹಾರ ಅಲ್ಲ ಎಂದು ವರ್ತಕರು ಹೇಳಿದರು.

ಎಪಿಎಂಸಿಯಲ್ಲಿ ಪರವಾನಗಿ ಪಡೆದ ಒಟ್ಟು 650 (ಪರುಷ ಮತ್ತು ಮಹಿಳೆಯರು ಸೇರಿ) ಮಂದಿ ಇದ್ದಾರೆ. ಎಲ್ಲರೂ ಮುಷ್ಕರದಲ್ಲಿ ಭಾಗಿಯಾಗಿದ್ದರಿಂದ ದಿನದ ವ್ಯಾಪಾರ–ವಹಿವಾಟು ಸ್ಥಗಿತಗೊಂಡಿತು. ಸೋಮವಾರ ಫಸಲನ್ನು ಬಳ್ಳಾರಿ ಎಪಿಎಂಸಿಗೆ ತಂದಿದ್ದ ರೈತರು ಮುಷ್ಕರದಿಂದಾಗಿ ತೊಂದರೆ ಅನುಭವಿಸಿದರು. 'ಕುಡುತಿನಿಯಿಂದ ಮೆಕ್ಕೆಜೋಳ ತೆಗೆದುಕೊಂಡು ಬಂದಿದ್ದೇನೆ. ಈಗ ನೋಡಿದರೆ ವ್ಯಾಪಾರ ಇಲ್ಲ ಎಂದು ಹೇಳುತ್ತಿದ್ದಾರೆ. ಮಧ್ಯಾಹ್ನದ ವರೆಗೆ ನೋಡಿ, ಫಸಲು ಇಲ್ಲೇ ಬಿಟ್ಟು ಊರಿಗೆ ತೆರಳುತ್ತೇನೆ' ಎಂದು ರೈತ ಪಂಪಾಪತಿ ಹೇಳಿದರು.

ಹಮಾಲರ ಬೇಡಿಕೆಗಳೇನು: 'ಉತ್ಪನ್ನಗಳನ್ನು ಚೀಲಕ್ಕೆ ತುಂಬುವುದು, ಸು–ರಿಯುವುದು, ತೂಕ ಹಾಕುವುದಕ್ಕೆ ಚೀಲಕ್ಕೆ 15 ರೂಪಾಯಿ ಕೇಳಿದ್ದೇವೆ. ಖಾಲಿ ಚೀಲಗಳನ್ನು ಖರೀದಿದಾರರ ಬಳಿಯಿಂದ ದಲ್ಲಾಳಿಗಳ ಬಳಿಗೆ ತರಲು ಪ್ರತಿ ಚೀಲಕ್ಕೆ 30 ಪೈಸೆ ಕೇಳುತ್ತಿದ್ದೇವೆ' ಎಂದು ಹಮಾಲರ ಸಂಘದ ಅಧ್ಯಕ್ಷ ಹನುಮಂತ ಹೇಳಿದರು. 'ಹೆಚ್ಚುವರಿ ಹಣ ಕೇಳಿದರೆ ವರ್ತರು ದಲ್ಲಾಳಿಗಳ ಬಳಿ ಮಾತಾಡಿ ಎನ್ನುತ್ತಿದ್ದಾರೆ. ಆದರೆ, ಹಣ ಕೊಡಬೇಕಾದವರು ವರ್ತಕರು ಹೀಗಾಗಿ ಮುಷ್ಕರ ಆರಂಭಿಸಿದ್ದೇವೆ' ಎಂದು ಹೇಳಿದರು. ಸಮಸ್ಯೆ ಇತ್ಯರ್ಥಕ್ಕೆಸಭೆ ಹಮಾಲಿಗಳು ಮತ್ತು ವರ್ತಕರ ನಡುವೆ ತಲೆದೋರಿದ್ದ ಸಮಸ್ಯೆ ಬಗೆಹರಿಸಲು ಎಪಿಎಂಸಿ ಕಾರ್ಯದರ್ಶಿ ನೇತೃತ್ವದಲ್ಲಿ ಸೋಮವಾರ ಸಭೆ ನಡೆಯಿತು. 'ಇಬ್ಬರೊಂದಿಗೂ ಸಮಾಲೋಚನೆ ನಡೆಸಲಾಗುತ್ತಿದೆ. ಸಮಸ್ಯೆ ಇತ್ಯರ್ಥಕ್ಕೆ ಪ್ರಯತ್ನಿಸಲಾಗುತ್ತಿದೆ ಎಂದು ಸಭೆಯಲ್ಲಿದ್ದ ಎಪಿಎಂಸಿ ಕಾರ್ಯದರ್ಶಿ ಜಯಕುಮಾರ್ ತಿಳಿಸಿದರು.

# ಕರುನಾಡ ವಿಜಯ ಸೇನೆ ಹೋರಾಟದ ಫಲ ಇಬ್ಬರು ತಜ್ಞವೈದ್ಯರ ನೇಮಕ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ತಾಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಾಯಿಲೆಗಳಿಗೆ ಸಂಬಂಧಪಟ್ಟ 5ಜನ ತಜ್ಞ ವೈದ್ಯರ ಹುದ್ದೆಗಳು ಖಾಲಿ ಇದ್ದು ಇದರಿಂದ ಈ ಭಾಗದ ಬಡರೋಗಿಗಳಿಗೆ ತುಂಬಾ ತೊಂದರೆಯಾಗಿದ್ದು ಕೂಡಲೇ 5 ತಜ್ಞ ವೈದ್ಯರನ್ನು ನೇಮಕ ಮಾಡಿ ಆದೇಶ ಮಾಡಬೇಕೆಂದು ದಿನಾಂಕ:– 25–08–2025 ರಂದು (D.H.O.) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಇವರಿಗೆ, ಮತ್ತು ಮಾನ್ಯ ಸಚಿವರಿಗೂ ಕೂಡ ಮನವಿ ಮಾಡಿದ್ದು.

ಅಂದಿನಿಂದ ಇಂದಿನವರೆಗೂ ಸಚಿವ–ರಿಗೂ ಮನವಿ ಮಾಡುತ್ತಾ ಬಂದಿದ್ದು, ಸಚಿವರು ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ರವರು ನಮ್ಮ ಮನವಿಗೆ ಸ್ಪಂದಿಸಿ ಇಬ್ಬರೂ ತಜ್ಞ ವೈದ್ಯರನ್ನು ನೇಮಕ ಮಾಡಿದ್ದಾರೆ. ಸತತವಾಗಿ ನಾಲ್ಕು ತಿಂಗಳ ಗಳಿಂದ ಕರುನಾಡ ವಿಜಯಸೇನೆ ತಾಲೂಕು ಸಮಿತಿಯ ವತಿಯಿಂದ ಹೋರಾಟ ಮಾಡುತ್ತಾ ಬಂದಿದೆ, ಈ ಹೋರಾಟದ




ಪ್ರತಿಫಲಕ್ಕೆ ಜಯ ಸಿಕ್ಕಿದೆ ಎಂದು ದಿನಾಂಕ:– 02–02–2026 ರಂದು ಸರಕಾರಿ ಸಾರ್ವಜನಿಕ ಆಸ್ಪತ್ರೆಗೆ ನೂತನವಾಗಿ ನೇಮಕಗೊಂಡ ಇಬ್ಬರು ತಜ್ಞ ವೈದ್ಯರಿಗೆ ಕರುನಾಡ ವಿಜಯ ಸೇನೆ ವತಿಯಿಂದ ಗೌರವ ಸನ್ಮಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಕರುನಾಡ ವಿಜಯಸೇನೆ ತಾಲೂಕು ಅಧ್ಯಕ್ಷ ಹನುಮಂತ ಬಡಿಗೇರ್, ತಾಲೂಕು ಉಪಾಧ್ಯಕ್ಷ ರಂಗಪ್ಪ ಭೋವಿ, ನಗರ ಘಟಕ ಅಧ್ಯಕ್ಷ ಬಸವರಾಜ ರತ್ತಾಳ, ಪ.ಜಾ/ಪ.ಪಂ. ಘಟಕ ಅಧ್ಯಕ್ಷ ದುರಗಪ್ಪ ಪೂಜಾರಿ, ಅಲ್ಪ ಅಸಂಖ್ಯಾತ ಘಟಕ ಅಧ್ಯಕ್ಷ ಜಾಫರ್ ಅರಬರ್, ಯುವ ಘಟಕ ಅಧ್ಯಕ್ಷ ಸಂಗನಗೌಡ ಪಾಟೀಲ, ತಾಲೂಕು ಮಹಿಳಾ ಘಟಕ ಅಧ್ಯಕ್ಷೆ ಶ್ರೀಮತಿ ಲಲಿತಾ ಮರಳಿ, ತಾಲೂಕು ಮಹಿಳಾ ಘಟಕ ಉಪಾಧ್ಯಕ್ಷೆ ಶ್ರೀಮತಿ ಗದ್ದೆಮ್ಮ ಮರಗಂಟನಾಳ, ತಾಲೂಕು ಪ್ರಧಾನ ಕಾರ್ಯದರ್ಶಿ ಶ್ರೀಮತಿ ರೇಷ್ಮಾ ಚಿಕ್ಕಜಾವೂರ, ಸಂಘಟನಾ ಕಾರ್ಯದರ್ಶಿ ಶ್ರೀಮತಿ ಸುನೀತಾ ಪವರ್, ಸಹ ಕಾರ್ಯದರ್ಶಿ ಶ್ರೀಮತಿ ಮಂಜುಳಾ ಚಿತಾಪೂರ, ಕಾರ್ಯದರ್ಶಿ ಶ್ರೀಮತಿ ಸುಮಂಗಲಾ ಚಿತಾಪೂರ, ತಾಲೂಕು ಖಜಾಂಚಿ ಶ್ರೀಮತಿ ಶಾಹಿನ್ ಬೇಗಂ ಆನೆಹೊಸೂರು, ತಾಲೂಕು ಯುವ ಮುಖಂಡ ಅಶೋಕ ಐದನಾಳ, ಚನ್ನಬಸವ ಮೇದನಾಪೂರ, ಹಾಗೂ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

ಭಾರತೀಯ ಕ್ರೀಡಾ ಪ್ರಾಧಿಕಾರ ನೇಮಕಾತಿ 2026–48 ಕಾರ್ಯಕ್ಷಮತೆ ವಿಶ್ಲೇಷಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಭಾರತ ಕ್ರೀಡಾ ಪ್ರಾಧಿಕಾರ ನೇಮಕಾತಿ 2026: 48 ಕಾರ್ಯಕ್ಷಮತೆ ವಿಶ್ಲೇಷಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಭಾರತೀಯ ಕ್ರೀಡಾ ಪ್ರಾಧಿಕಾರ ಫೆಬ್ರವರಿ 2026 ರ ಅಧಿಕೃತ ಅಧಿಸೂಚನೆಯ ಮೂಲಕ ಕಾರ್ಯಕ್ಷಮತೆ ವಿಶ್ಲೇಷಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 09–ಮಾರ್ಚ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 10–02–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 09–ಮಾರ್ಚ್–2026 ಅಧಿಕೃತ ವೆಬ್‌ಸೈಟ್: sportsauthorityofindia.nic.in

# ಮೈಲಾಪುರ ಗ್ರಾಮದಲ್ಲಿ ವೀರಯೋಧ ಅವಲ್ದಾರ ಶ್ರೀ ವೀರೇಶ್ ಗಾದಿಗನೂರ್ ಅವರಿಗೆ ಐತಿಹಾಸಿಕ ಸ್ವಾಗತ

ನೈಜ್ಯ ದೆಸೆ ನ್ಯೂಸ್

**ಮೈಲಾಪುರ: ಕಾರಟಗಿ ತಾಲೂಕಿನ ಮೈಲಾಪುರ ಗ್ರಾಮದ ಹೆಮ್ಮೆಯ ಪುತ್ರರಾದ ವೀರಯೋಧ ಅವಲ್ದಾರ ಶ್ರೀ ವೀರೇಶ್ ಗಾದಿಗನೂರ್ (ತಂದೆ: ಪಂಪನಗೌಡ ಗಾದಿಗನೂರ್) ಅವರು ದೇಶಸೇವೆಯಿಂದ ಸ್ವಗ್ರಾಮಕ್ಕೆ ಆಗಮಿಸಿದ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿ ಹಾಗೂ ಸಮಸ್ತ ಗ್ರಾಮಸ್ಥರ ಸಹಕಾರದಿಂದ ಅದ್ದೂರಿ ಸ್ವಾಗತ ಮತ್ತು ಗೌರವ ಸಮಾರಂಭವನ್ನು ವೈಭವದಿಂದ ಆಯೋಜಿಸಲಾಯಿತು.**

ಗ್ರಾಮದ ಶ್ರೀ ಶರಣಬಸವೇಶ್ವರ ದೇವಸ್ಥಾನದಿಂದ ಆರಂಭಗೊಂಡ ಮೆರವಣಿಗೆ ಕಲ್ಲಿನಾಥ ದೇವಸ್ಥಾನದವರೆಗೆ ಭಾರೀ ಜನಸಾಗರದೊಂದಿಗೆ ನಡೆಯಿತು. ಡೊಳ್ಳು–ವಾದ್ಯಗಳು, ಘೋಷಣೆಗಳು, ಹೂಮಾಲೆ ಹಾಗೂ ಪಟಾಕಿಗಳೊಂದಿಗೆ ವೀರಯೋಧನಿಗೆ ಜನರು ಗೌರವ ಸಲ್ಲಿಸಿದರು. ಮೆರವಣಿಗೆಯ ನಂತರ ಕಲ್ಲಿನಾಥ ದೇವಸ್ಥಾನದ ಪಕ್ಕದಲ್ಲಿ



ಬೃಹತ್ ವೇದಿಕೆ ಕಾರ್ಯಕ್ರಮವನ್ನು ಅತ್ಯಂತ ಸಡಗರದಿಂದ ಜರುಗಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ತಲಕನಮಠ ಕಾರಟಗಿಯ ವೇದಮೂರ್ತಿ ಶ್ರೀ ವೀರಭದ್ರಯ್ಯ ಸ್ವಾಮಿಗಳು, ಬೇವಿನಾಳ–ಮೈಲಾಪುರ ಹಿರೇಮಠದ ಶ್ರೀ ವೇದಮೂರ್ತಿ ನಿಜಗುಣಾನಂದ ಸ್ವಾಮೀಜಿಗಳು, ಅಮರಯ್ಯ ತಾತನವರು ಹಾಗೂ ಪಂಪಯ್ಯ ಸಿದ್ದಲಿಂಗಯ್ಯ ಸ್ವಾಮೀಜಿಗಳು ಉಪಸ್ಥಿತರಿದ್ದು ವೀರಯೋಧನಿಗೆ ಆಶೀರ್ವಚನ ನೀಡಿದರು.

ಸ್ವಾಮೀಜಿಗಳು ಮಾತನಾಡಿ, “ದೇಶದ ಗಡಿಗಳಲ್ಲಿ ಪ್ರಾಣಪಣ ತೊಟ್ಟು ಸೇವೆ ಸಲ್ಲಿಸುವ ಸೈನಿಕರು ನಮ್ಮ ನಿಜವಾದ ನಾಯಕರು. ಇಂತಹ ವೀರರನ್ನು ಗೌರವಿಸುವ ಸಂಸ್ಕಾರ ಗ್ರಾಮಗಳಲ್ಲಿ ಉಳಿಯಬೇಕು” ಎಂದು ಹೇಳಿದರು. ವೇದಿಕೆಯಲ್ಲಿ ಮಾತನಾಡಿದ ಗಣ್ಯರು, ವೀರೇಶ್ ಗಾದಿಗನೂರ್ ಅವರು ಯುದ್ಧಭೂಮಿಯಲ್ಲಿ ಹಾಗೂ ದೇಶದ ಭದ್ರತೆಗೆ ಸಲ್ಲಿಸುತ್ತಿರುವ ಸೇವೆ, ಶಿಸ್ತು, ತ್ಯಾಗ ಮತ್ತು ಧೈರ್ಯವನ್ನು ವಿವರಿಸಿ ಜನರಿಗೆ ಸೈನಿಕರ ಕರ್ತವ್ಯದ ಮಹತ್ವವನ್ನು ಪರಿಚಯಿಸಿದರು. ಯುವಜನತೆ ದೇಶಸೇವೆಯತ್ತ ಪ್ರೇರಿತರಾಗಬೇಕೆಂದು ಕರೆ ನೀಡಲಾಯಿತು.

ಕಾರ್ಯಕ್ರಮದ ನಿರೂಪಣೆಯನ್ನು ಅಮರೇಶ್ ಶಿಕ್ಷಕರು (ಮೈಲಾಪುರ) ಸೊಗಸಾಗಿ ನಡೆಸಿಕೊಟ್ಟರು. ವೇದಿಕೆಯಲ್ಲಿ ವೀರನಗೌಡ ಮಾಲಿಪಾಟೀಲ್, ಅಮರೇಗೌಡ ಮಾಲಿಪಾಟೀಲ್, ತಿರುಪತಿ ಗುಡದಾಳ, ಅನ್ನದಾನ ಗೌಡ, ಪೊಲೀಸ್ ಪಾಟೀಲ್, ಡಾ. ದೇವೇಂದ್ರಪ್ಪ ಬೊಮ್ಮನಾಳ, ಶರಣಪ್ಪ ದಾಸನಾಳ, ದೊಡ್ಡಬಸವ ಗೋಡಿನಾಳ ಸೇ–ರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ಸಮಾರಂಭದಲ್ಲಿ ಸಮಸ್ತ ಊರಿನ ಗ್ರಾಮಸ್ಥರು, ಹಿರಿಯರು, ಮಹಿಳೆಯರು ಹಾಗೂ ಯುವಕರು ಭಾರೀ ಸಂಖ್ಯೆಯಲ್ಲಿ ಭಾಗವಹಿಸಿ ವೀರಯೋಧನಿಗೆ ಹಾರ್ದಿಕ ಗೌರವ ಸಲ್ಲಿಸಿದರು. ಈ ಕಾರ್ಯಕ್ರಮ ಮೈಲಾಪುರ ಗ್ರಾಮಕ್ಕೆ ಹೆಮ್ಮೆ ತಂದ ಐತಿಹಾಸಿಕ ಕ್ಷಣವಾಗಿ ಉಳಿಯಿತು.

## ರಾಜ್ಯಾಧ್ಯಕ್ಷ ಡಾ.ಎಸ್.ಎಸ್.ಪಾಟೀಲರಿಗೆ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದಲ್ಲಿ ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಹಂಡೇ ವಜೀರ ಸಮಾಜದ ತಾಲೂಕ ಘಟಕದ ವತಿಯಿಂದ ಹಮ್ಮಿಕೊಂಡ 2026 ನೇ ಸಾಲಿನ ರಾಜ್ಯಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಸಮಾಜದ ರಾಜ್ಯಾಧ್ಯಕ್ಷ ಡಾ.ಎಸ್.ಎಸ್.ಪಾಟೀಲ (ವಿಜಯಪುರ) ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.**




ಪೂಜ್ಯರಾದ ಜಯಗುರು ಸಿದ್ದೇಶ್ವರ ಮಹಾಸ್ವಾಮಿಗಳು, ಗುರುಮಡಿವಾಳೇಶ್ವರ ಶಿವಾಚಾರ್ಯರು, ಶಿವಕುಮಾರ ಶ್ರೀಗಳು,ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಾ.ಪ್ರಭುಗೌಡ ಲಿಂಗದಳ್ಳಿ, ಅಸ್ಕಿ ಫೌಂಡೇಶನ್ ಅಧ್ಯಕ್ಷ ಸಿ.ಬಿ.ಅಸ್ಕಿ, ಬಿಜೆಪಿ ಮುಖಂಡ ಆರ್ ಎಸ್ ಪಾಟೀಲ ಕೂಚಬಾಳ, ತಾಳಿಕೋಟಿ ಘಟಕದ ಅಧ್ಯಕ್ಷ ರಾಮನಗೌಡ ಬಿರಾದಾರ ಹಾಗೂ ಗಣ್ಯಮಾನ್ಯರು ಇದ್ದರು.

# ಪಾದಯಾತ್ರೆಗೆ ಅನುಮತಿ ನೀಡಲು ಆಗ್ರಹಿಸಿ ಮನವಿ




ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಕಲಕೇರಿ ಗ್ರಾಮದ ಗ್ರಾಮ ಪಂಚಾಯತ್ ದಲ್ಲಿ ನಡೆದ ಭ್ರಷ್ಟಾಚಾರ ಆರೋಪದ ತನಿಖೆ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಫೆಬ್ರವರಿ 11ರಂದು ಕಲಕೇ–ರಿಯಿಂದ ವಿಜಯಪುರ ದವರೆಗೆ ನಡೆಯಲಿರುವ ಪಾದಯಾತ್ರೆ ಕಾರ್ಯಕ್ರಮಕ್ಕೆ ಅನುಮತಿ ನೀಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ(ಸಾಗರ ಬಣ)ಕಲಕೇರಿ ವಲಯ ಸಂಚಾಲಕ ಸೋಮಶೇಖರ ಪಿ.ಬಡಿಗೇರ ನೇತೃತ್ವದಲ್ಲಿ ತಹಸಿಲ್ದಾರ್ ಡಾ.ವಿನಯಾ ಹೂಗಾರ ಇವರಿಗೆ ಮನವಿ ಸಲ್ಲಿಸಲಾಯಿತು.**

ಮನವಿ ಪತ್ರದಲ್ಲಿ ಕಲ್ಕೇರಿ ಗ್ರಾಮ ಪಂಚಾಯತ್ ನಲ್ಲಿ ನಡೆದ ಭ್ರಷ್ಟಾಚಾರವನ್ನು ತನಿಖೆ ನಡೆಸಲು ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಜನವರಿ 23ರಂದು ಅಹೋರಾತ್ರಿ ಧರಣಿ ಹಮ್ಮಿಕೊಳ್ಳಲಾಗಿತ್ತು. ಧರಣಿ ಸ್ಥಳಕ್ಕೆ ತಹಸಿಲ್ದಾರ ಅವರು ಆಗಮಿಸಿ ಮಾತುಕತೆ ನಡೆಸಿ ಒಂದು ವಾರದ ಒಳಗೆ ಸಂಬಂಧಿಸಿದ ಅಧಿಕಾ–ರಿಗಳು ಹೋರಾಟಗಾರರಿಗೆ ವರದಿ ನೀಡುವಂತೆ ಸೂಚನೆ ನೀಡಿ ಅಲ್ಲಿಯವರೆಗೆ ಧರಣಿ ಸ್ಥಗಿ–ತಗೊಳಿಸುವಂತೆ ತಿಳಿಸಿದ ಹಿನ್ನೆಲೆಯಲ್ಲಿ ಧರಣಿ ತಾತ್ಕಾಲಿಕವಾಗಿ ಕೈ ಬಿಡಲಾಗಿತ್ತು.

ಇದೀಗ ಕೊಟ್ಟ ವಾಯ್ದೆಯ ಅವಧಿ ಮುಗಿದು ಹೋಗಿದ್ದು ಇಲ್ಲಿವರೆಗೆ ಯಾವುದೇ ವರದಿ ಕೊಟ್ಟಿಲ್ಲ ಜೊತೆಗೆ ಸೂಕ್ತ ಸ್ಪಂದನೆಯೂ ಸಿಕ್ಕಿಲ್ಲ ಆದಕಾರಣ ಸಂಘಟನೆಯ ಪದಾಧಿಕಾ–ರಿಗಳ ನಿರ್ಣಯದಂತೆ ಫೆಬ್ರವರಿ 11ರಂದು ಕಲಕೇರಿ– ವಿಜಯಪುರ ದವರೆಗೆ ಪಾದಯಾತ್ರೆ ನಡೆಸಲು ತೀರ್ಮಾನಿಸಲಾಗಿದೆ. ಸದರಿ ಪಾದಯಾತ್ರೆಯು ಫೆಬ್ರವರಿ 11ರಂದು ಬೆಳಿಗ್ಗೆ 10:00 ಗಂಟೆಗೆ ಕಲ್ಕೇರಿಯ ಅಂಬೇಡ್ಕರ್ ವೃತ್ತದಿಂದ ಆರಂಭವಾಗಿ ವಿವಿಧ ಗ್ರಾಮಗಳ ಮೂಲಕ ಹಾದು ಫೆಬ್ರವರಿ 14ರಂದು ವಿಜಯಪುರ ನಗರಕ್ಕೆ ತಲುಪಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಕಾರ್ಯಕ್ರಮದ ಯಶಸ್ವಿಗೆ ಅನುಮತಿ ನೀಡಬೇಕೆಂದು ವಿನಂತಿಸಲಾಗಿದೆ. ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಕಂಡೊಡೊಂಜಿ ಪ್ರಿಮಿಯಾರ್ ಲೀಗ್ ಸೀಸನ್ ಅಮಣಬೆಟ್ಟು ಫ್ರೆಂಡ್ಸ್ ಸರ್ಕಲ್ ರನ್ನರ್‌ಅಪ್

ನೈಜ್ಯ ದೆಸೆ ನ್ಯೂಸ್

**ಮಂಗಳೂರು/ಮೂಲ್ಕಿ: ಸಮೀಪದ ಕಿಲೆಂಜೂರು ಗ್ರಾಮದಲ್ಲಿ ಎಸ್.ಡಿ.ಎಂ ಕ್ರಿಕೆಟರ್ಸ್ ವತಿಯಿಂದ ಆಯೋಜಿಸಲಾದ ಕಂಡೊಡೊಂಜಿ ಪ್ರಿಮಿಯಾರ್ ಲೀಗ್ ಸೀಸನ್–2 ಕ್ರಿಕೆಟ್ ಪಂದ್ಯಾವಳಿಯಲ್ಲಿ, ಅಮಣಬೆಟ್ಟು ಫ್ರೆಂಡ್ಸ್ ಸರ್ಕಲ್ ತಂಡ ರನ್ನರ್‌ಅಪ್ ಪ್ರಶಸ್ತಿಯನ್ನು ಗೆದ್ದುಕೊಂಡಿದೆ.**




ಪಂದ್ಯಾವಳಿ ಭಾರೀ ಉತ್ಸಾಹ ಹಾಗೂ ಕ್ರೀಡಾಭಿಮಾನಿಗಳ ಅಪಾರ ಬೆಂಬಲದೊಂದಿಗೆ ನಡೆಯಿತು. ಅಂತಿಮ ಪಂದ್ಯದಲ್ಲಿ ಅಮಣಬೆಟ್ಟು ಫ್ರೆಂಡ್ಸ್ ಸರ್ಕಲ್ ತಂಡ ಉತ್ತಮ ಪ್ರದರ್ಶನ ನೀಡಿ ಗಮನ ಸೆಳೆಯಿತು. ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ವಿಜೇತ ಮತ್ತು ರನ್ನರ್‌ಅಪ್ ತಂಡಗಳಿಗೆ ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಆಯೋಜಕರು, ಗಣ್ಯ ಅತಿಥಿಗಳು, ಕ್ರೀಡಾಭಿಮಾನಿಗಳು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

# ಮಸ್ಕಿ ಪಟ್ಟಣದಲ್ಲಿ ರಾಯಚೂರು ಉತ್ಸವ ಜ್ಯೋತಿ ರಥಯಾತ್ರೆಗೆ ಅದ್ದೂರಿ ಸ್ವಾಗತ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದ ಗಾಂಧಿನಗರದ ಡಾಕ್ಟರ್ ಬಿ ಆರ್ ಅಂಬೇಡ್ಕರ್ ಪ್ರತಿಮೆ ಮುಂಭಾಗದಲ್ಲಿ ಆಗಮಿಸಿದ ಎಡದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ ಅಂಗವಾಗಿ ಜಿಲ್ಲಾಡಳಿತ ರೂಪಿಸಿರುವ ರಥಯಾತ್ರೆಗೆ ಪಟ್ಟಣದಲ್ಲಿ ಮಸ್ಕಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸಿದ್ದನಗೌಡ ತುರುವಿಹಾಳ ಚಾಲನೆ ನೀಡಿದರು.**

ನಂತರ ಪಟ್ಟಣದ ಹಳೆ ಪ್ರವಾಸ ಮಂದಿರ ಮುಂಭಾಗದಿಂದ ಮೆರವಣಿಗೆ ಪ್ರಾರಂಭಗೊಂಡು ಅಶೋಕ ವೃತ್ತ, ಚೆನ್ನಮ್ಮ



ವೃತ್ತ,ಕನಕ ವೃತ್ತ, ರಾಷ್ಟ್ರೀಯ ಹೆದ್ದಾ–ರಿಯ ಮುಖ್ಯರಸ್ತೆಯ ಮೂಲಕ ವಾಲ್ಮೀಕಿ ವೃತ್ತದಲ್ಲಿ,ಬೀಳ್ಕೊಡಲಾಯಿತು. ಈ ವೇಳೆಯಲ್ಲಿ ಪುರಸಭೆ ಅಧ್ಯಕ್ಷ ಸುರೇಶ್ ಅರಸುರು, ಸ್ಥಾಯಿ ಸಮಿತಿ ಅಧ್ಯಕ್ಷ ಚೇತನ್ ಪಾಟೀಲ್, ಪುರಸಭಾ ಸದಸ್ಯರು, ತಹಸಿಲ್ದಾರ ಮಂಜುನಾಥ ಭೋಗವತಿ, ತಾಲೂಕು ಪಂಚಾಯತಿ ಇಒ ಅಮರೇಶ್ ಯಾದವ, ಪುರಸಭಾ ಮುಖ್ಯ ಅಧಿಕಾರಿ ನರಸಾರೆಡ್ಡಿ , ಇನ್ನಿತರ ಅಧಿಕಾ–ರಿಗಳು, ಪ್ರಗತಿಪರ ಸಂಘಟನೆಯ ಪದಾಧಿಕಾ–ರಿಗಳು, ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾ–ರಿಗಳು, ಶಾಲಾ ಕಾಲೇಜಿನ ಪ್ರಾಂಶುಪಾಲರು, ಶಿಕ್ಷಕ ವೃಂದ, ವಿವಿಧ ಶಾಲಾ ಕಾಲೇಜಿನ ವಿದ್ಯಾರ್ಥಿಗಳು ಈ ರಥಯಾತ್ರೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು.

# ಆರ್‌ವೈಎಂಇಸಿಗೆ ನಾಲ್ಕು ರ್‍ಯಾಂಕ್‌ಗಳು

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘದ ರಾವ್ ಬಹದ್ದೂರ್ ವೈ. ಮಹಾಬಲೇಶ್ವರಪ್ಪ ಇಂಜಿನಿಯರಿ0ಗ್ ಕಾಲೇಜಿನನಾಲ್ಕು ವಿದ್ಯಾರ್ಥಿಗಳು 2024–25ನೇ ಶೈಕ್ಷಣಿಕ ವರ್ಷದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ ರಾಜ್ಯ ಮಟ್ಟದಲ್ಲಿ ರ?ಯಾಂಕ್‌ಗಳನ್ನು ಪಡೆದಿದ್ದಾರೆ.**

ರಾಹುಲ್ ಡೇವಿಡ್ ಬಿ, ಎಂ.ಟೆಕ್. ಪ್ರೊಡಕ್ಷನ್ ಮ್ಯಾನೇಜ್ಮೆಂಟ್ ನಲ್ಲಿ ಪ್ರಥಮ ರ್‍ಯಾಂಕ್ ಪಡೆದು ಚಿನ್ನದ ಪದಕವನ್ನು ಪಡೆದಿದ್ದಾರೆ. ಎಂ.ಟೆಕ್



ಮೆಕ್ಯಾನಿಕಲ್ ಎಂಜಿನಿಯರಿ0ಗ್ ನಲ್ಲಿ ರ?ಯಾಂಕ್ ಪಡೆದವರಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿದ್ದಕ್ಕಾಗಿ ಅವರು ಜೈನ್ ವಿಶ್ವವಿದ್ಯಾಲಯ ಪ್ರಯೋಜಿತ ಚಿನ್ನದ ಪದಕವನ್ನು ಕೂಡ ಪಡೆದಿದ್ದಾರೆ.

ಬಲರಾಜ್ ಎಲ್.ಡಿ, ಎಂ.ಟೆಕ್. ಪ್ರೊಡಕ್ಷನ್ ಮ್ಯಾನೇಜ್ಮೆಂಟ್‌ನಲ್ಲಿ ಎರಡನೇ ರ್‍ಯಾಂಕ್, ನಿತ್ಯ ಸಂತೋಷಿ ಎಚ್, ಎಂ.ಟೆಕ್. ವಿ.ಎಲ್.ಎಸ್.ಐ ಡಿಜೈನ್ ಆಯಂಡ್ ಎಂಬೆಡೆಡ್ ಸಿಸ್ಟಮ್ ನಲ್ಲಿ ಮೂರನೇ ರ?ಯಾಂಕ್ ಮತ್ತು ಸುಮಲತಾ, ಎಂ.ಟೆಕ್. ವಿ.ಎಲ್.ಎಸ್.ಐ ಡಿಜೈನ್ ಆಯಂಡ್ ಎಂಬೆಡೆಡ್ ಸಿಸ್ಟಮ್ ನಲ್ಲಿ, ನಾಲ್ಕನೇ ರ್‍ಯಾಂಕ್ ಪಡೆದಿದ್ದಾರೆ.

# ದಕ್ಷಿಣ ಕಾಶಿ ಸುಕ್ಷೇತ್ರ ಶ್ರೀ ಜಗದ್ಗುರು ತಿಂಥಣಿ ಮೌನೇಶ್ವರ ಜಾತ್ರಾ ಮಹೋತ್ಸವದಲ್ಲಿ :ಕೆ ಪಿ ನಂಜುಂಡಿ ಭಾಗಿ

ನೈಜ್ಯ ದೆಸೆ ನ್ಯೂಸ್

**ಸುರಪುರ ತಾಲೂಕಿನ ದಕ್ಷಿಣ ಕಾಶಿ ಎಂದು ಪ್ರಸಿದ್ಧವಾದ ಐತಿಹಾಸಿಕ ಸುಕ್ಷೇತ್ರ ತಿಂಥಣಿ ಶ್ರೀ ಜಗದ್ಗುರು ಮೌನೇಶ್ವರ ಜಾತ್ರಾ ಮಹೋತ್ಸವವು ಭಕ್ತಿಭಾವ, ಸಂಸ್ಕೃತಿ ಹಾಗೂ ಸಮಾಜಸೇವೆಯ ಸಂದೇಶದೊಂದಿಗೆ ಅದ್ದೂರಿಯಾಗಿ ನಡೆಯಿತು. ಈ ಮಹೋತ್ಸವದ ಅಂಗವಾಗಿ ವಿಶ್ವಕರ್ಮ ಸಮಾಜದ ಧೀಮಂತ ನಾಯಕರು, ಹುಟ್ಟುಹೋರಾಟಗಾರರು, ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭೆಯ ರಾಜ್ಯಾಧ್ಯಕ್ಷರಾದ ಸನ್ಮಾನ್ಯ ಶ್ರೀ ಕೆ.ಪಿ. ನಂಜುಂಡಿ ಸರ್ ಅವರು ತಿಂಥಣಿ ಶ್ರೀ ಮೌನೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಮೌನೇಶ್ವರರ ದರ್ಶನ ಪಡೆದರು.**

ಈ ವೇಳೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ವಿಶ್ವಕರ್ಮ ಸಮಾಜದ ಮುಖಂಡರು, ಪದಾಧಿಕಾರಿಗಳು, ಹಿರಿಯರು, ಯುವಕರು ಹಾಗೂ ಅಪಾರ ಸಂಖ್ಯೆಯ ಭಕ್ತರು ಜೈಘೋಷಗಳೊಂದಿಗೆ ಅವರನ್ನು ಭವ್ಯವಾಗಿ ಸ್ವಾಗತಿಸಿದರು. ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ನಡೆದ ಧಾರ್ಮಿಕ



ಕಾರ್ಯಕ್ರಮಗಳು, ಪೂಜೆಗಳು, ಭಜನೆ ಮತ್ತು ಪ್ರವಚನಗಳು ಭಕ್ತರಲ್ಲಿ ಆಧ್ಯಾತ್ಮಿಕ ಉತ್ಸಾಹ ತುಂಬಿದವು. ದರ್ಶನ ನಂತರ ಸನ್ಮಾನ್ಯ ಕೆ.ಪಿ. ನಂಜುಂಡಿ ಸರ್ ಅವರು ದೇವಸ್ಥಾನ ಸುತ್ತಮುತ್ತಲ ಪ್ರದೇಶ ಹಾಗೂ ಹೊಳೆಯ ದಡವನ್ನು ವೀಕ್ಷಿಸಿದರು. ಈ ವೇಳೆ ಸ್ವಚ್ಛತೆ ಕಾಪಾಡುವಲ್ಲಿ ಅಗತ್ಯ ಕ್ರಮಗಳ ಕೊರತೆ, ಕಸ ವಿಲೇವಾರಿ ವ್ಯವಸ್ಥೆಯ ಅಭಾವ, ಭಕ್ತರಿಗೆ ವಿಶೇಷವಾಗಿ ಮಹಿಳೆಯರಿಗೆ ಅಗತ್ಯವಾದ ಸ್ನಾನಗೃಹ ಮತ್ತು ಶೌಚಾಲಯಗಳ ವ್ಯವಸ್ಥೆ ಇಲ್ಲದಿರುವುದು ಗಮನಕ್ಕೆ ಬಂದು ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಇಂತಹ ಮಹತ್ವದ ಪುಣ್ಯಕ್ಷೇತ್ರದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ವಿಷಾದಕರ ಸಂಗತಿ ಎಂದು ಅಭಿಪ್ರಾಯಪಟ್ಟರು.

ಇದೇವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಿಂಥಣಿ ಶ್ರೀ ಮೌನೇಶ್ವರ ಕ್ಷೇತ್ರವು ಕೇವಲ ಒಂದು ಧಾರ್ಮಿಕ ಕೇಂದ್ರವಲ್ಲ, ಇದು ವಿಶ್ವಕರ್ಮ ಸಮಾಜದ ಇತಿಹಾಸ, ಪರಂಪರೆ ಹಾಗೂ ಸಂಸ್ಕೃತಿಯ ಜೀವಂತ ಪ್ರತೀಕವಾಗಿದೆ. ಇಂತಹ ಪುಣ್ಯಕ್ಷೇತ್ರವನ್ನು ಸರ್ಕಾರ ವಿಶೇಷ ಯೋಜನೆಯಡಿ ಗುರುತಿಸಿ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು. ಅವರು ಮುಂದುವರೆದು ಮಾತನಾಡುತ್ತಾ, ದೇವಸ್ಥಾನ, ಜಾತ್ರಾ ಪ್ರದೇಶ ಹಾಗೂ ಹೊಳೆಯ ದಡದಲ್ಲಿ ಶಾಶ್ವತ ಸ್ವಚ್ಛತಾ ವ್ಯವಸ್ಥೆ ರೂಪಿಸಬೇಕು ಮಹಿಳೆಯರು, ವೃದ್ಧರು ಹಾಗೂ ಮಕ್ಕಳಿಗೆ ಅನುಕೂಲವಾಗುವಂತೆ ಸ್ನಾನಗೃಹ, ಶೌಚಾಲಯ, ವಿಶ್ರಾಂತಿ ಮಂದಿರ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಭಕ್ತರ ಸುರಕ್ಷತೆ ಹಾಗೂ ಸುಗಮ ಸಂಚಾರಕ್ಕಾಗಿ ರಸ್ತೆ, ಬೆಳಕು ಮತ್ತು ಭದ್ರತಾ ವ್ಯವಸ್ಥೆಗಳನ್ನು ಬಲಪಡಿಸಬೇಕು ತಿಂಥಣಿ ಶ್ರೀ ಮೌನೇಶ್ವರ ಕ್ಷೇತ್ರದ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ‘ತಿಂಥಣಿ ಮೌನೇಶ್ವರ ಅಭಿವೃದ್ಧಿ ಪ್ರಾಧಿಕಾರ’ ಸ್ಥಾಪನೆ ಮಾಡಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಸಮಾಜದ ಬಂಧುಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ನಮ್ಮ ಪುಣ್ಯಕ್ಷೇತ್ರಗಳು ಮತ್ತು ದೇವಸ್ಥಾನಗಳ ಸಂರಕ್ಷಣೆ ಸರ್ಕಾರದ ಜೊತೆಗೆ ಸಮಾಜದ ಜವಾಬ್ದಾರಿಯೂ ಹೌದು. ಸರ್ಕಾರದಿಂದ ಬೇಕಾದ ಸೌಲಭ್ಯಗಳನ್ನು ಪಡೆದುಕೊಳ್ಳಬೇಕಾದರೆ ನಾವುಗಳೆಲ್ಲರೂ ಒಗ್ಗಟ್ಟಾಗಿ ಸಂಘಟಿತರಾಗಿ ಹೋರಾಟ ನಡೆಸಬೇಕಾಗುತ್ತದೆ ಎಂದು ಕರೆ ನೀಡಿದರು. ಸಮಾಜದ ಸಂಘಟನೆ, ಏಕತೆ ಮತ್ತು ಶಕ್ತಿಯೇ ಅಭಿವೃದ್ಧಿಗೆ ಮೂಲವೆಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ವಿಶ್ವಕರ್ಮ ಸಮಾಜದ ಅನೇಕ ಗಣ್ಯರು, ವಿವಿಧ ಜಿಲ್ಲೆಗಳ ಪದಾಧಿಕಾರಿಗಳು, ಸ್ಥಳೀಯ ಮುಖಂಡರು, ದೇವಸ್ಥಾನ ಸಮಿತಿಯ ಸದಸ್ಯರು ಹಾಗೂ ಭಕ್ತರು ಉಪಸ್ಥಿತರಿದ್ದು, ಸನ್ಮಾನ್ಯ ಕೆ.ಪಿ. ನಂಜುಂಡಿ ಸರ್ ಅವರ ಅಭಿಪ್ರಾಯಗಳಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು. ಜಾತ್ರಾ ಮಹೋತ್ಸವವು ಧಾರ್ಮಿಕ ಆಚರಣೆಗಳ ಜೊತೆಗೆ ಸಮಾಜ ಜಾಗೃತಿ ಮತ್ತು ಅಭಿವೃದ್ಧಿಯ ಸಂದೇಶ ನೀಡುವ ವೇದಿಕೆಯಾಗಿದ್ದು ಎಲ್ಲರ ಮನಸ್ಸಿನಲ್ಲಿ ವಿಶೇಷ ಸ್ಥಾನ ಪಡೆದುಕೊಂಡಿತು.

